ಆ ವೇಳೆಗೆ ಯಜಮಾನರು ಒಂದೆರಡು ಪುಸ್ತಕಗಳನ್ನು ಬರೆದು ಹೆಸರು ಮಾಡಿದ್ದರು. ಪ್ರಗತಿಶೀಲ ಚಳವಳಿಯ ಕಾಲವಾಗಿದ್ದ ಆಗ ಎಲ್ಲೆಲ್ಲೂ ಅ.ನ.ಕೃ. ನೇತೃತ್ವದ ಈ ಚಳವಳಿಯ ಬರಹಗಾರರ ಮಾತೇ!

ಒಮ್ಮೆ ಅ.ನ.ಕೃ. ಮತ್ತು ಮಿತ್ರರು ನಮ್ಮ ಮನೆಗೆ ಅತಿಥಿಗಳಾಗಿ ಊಟಕ್ಕೆ ಬಂದಿದ್ದರು. ಬಡಿಸಿದ ಅನ್ನದಲ್ಲಿ ಒಂದು ಹುಲ್ಲುಬೀಜ ಸಿಕ್ಕಿತೆಂದು ಯಜಮಾನರು ಸಿಟ್ಟಾಗಿ 'ನಿನಗೆ ಕಣ್ಣಿಲ್ಲವೆ?' ಎಂದು ಗರ್ಜಿಸಿದರು. ಆಗಿನ್ನೂ ಸಂಸಾರ ಹೂಡಿದ ಹೊಸತು. ಬಂದವರೆದುರಿಗೆ ಈ ಅವಮಾನ. ಊಟ ಬಡಿಸಲು ಅಂಜಿ, ಅಳುವನ್ನು ತಡೆದು, ದಿಕ್ಕು ತೋಚದೆ ನಿಂತಿದ್ದ ನನ್ನ ನೋವನ್ನು ಅರಿತು ಅ.ನ.ಕೃ. ಅಂದು ನನ್ನ ಪಾಲಿಗೆ ತಂದೆಯ ಹಾಗೆ ನೆರವಿಗೆ ಬಂದರು. ತಮ್ಮ 'ಸುಬ್ಬು'ವಿಗೆ ಸಮಾಧಾನ ಹೇಳಿದರು.

ಇನ್ನೊಮ್ಮೆ ಅ.ನ.ಕೃ. ಅವರ ಮನೆ 'ಅನ್ನಪೂರ್ಣ'ಕ್ಕೆ ನಾನು ಯಜಮಾನರೊಡನೆ ಹೋದಾಗ ಊಟಕ್ಕೆ ಎಬ್ಬಿಸಿದರು. ನಾನು ಸಂಕೋಚಪಡುತ್ತಿದ್ದುದನ್ನು ಕಂಡ ಕಿಟ್ಟಣ್ಣ – 'ನೀನೇನೂ ಹೆದರಬೇಡಮ್ಮ. ನಾನು ಸುಬ್ಬನ ಹಾಗೆ ಎಲ್ಲರ ಎದುರಿಗೆ ಅವಮಾನ ಮಾಡೋಲ್ಲ' ಎಂದು ಉಪಚರಿಸಿದರು. ಅವರ ಮಾತು ಕೇಳಿ ವಿಶಾಲಕ್ಕ (ವಂತಾದೇವಿ ಅ.ನ.ಕೃ.), 'ಏನು ನೀವು ಹೇಳ್ತಾ ಇರೋದು' ಎಂದರು.

ಹುಲ್ಲು ಬೀಜ ಸಿಕ್ಕಿ ರಾಯರು ಸಿಟ್ಟಾದ ಘಟನೆ ಹೇಳಿದರು ಅ.ನ.ಕೃ.

'ಏನು ಸುಬ್ಬರಾಯರೇ, ನೀವು ಹೀಗೆ ಮಾಡುವುದೇ? ಆಕೆಗೆ ಬೆಂಗಳೂರು ಹೊಸತು, ನಿಮ್ಮನ್ನು ಕಂಡರೆ ಮೊದಲೇ ನಡುಗುತ್ತಾರೆ. ಹೀಗೆ ಹೆದರಿಸಿದರೆ ಹೇಗೆ?' ಎಂದರು.

'ಏನು ವಿಶಾಲಕ್ಕ, ನೀವು ಹೆಂಗಸರು ಒಬ್ಬರೊನ್ನೊಬ್ಬರು ಒಪ್ಪ ಇಟ್ಟುಕೊಂಡು ಬರುತ್ತೀರಿ' ಎಂದು ತ.ರಾ.ಸು. ಹೇಳಿದಾಗ 'ನೀವು ತಾನೇ ಏನು? ಗಂಡಸರೆಲ್ಲಾ ಒಂದೇ' ಎಂದರು ವಿಶಾಲಕ್ಕ. ಆ ಮಾತಿನಲ್ಲಿ ಅ.ನ.ಕೃ. ಅವರನ್ನು ದೂರುವ ಧ್ವನಿ ಇತ್ತೇನೋ!

ಬೆಂಗಳೂರು ಬಿಟ್ಟು ಮೈಸೂರಿನಲ್ಲಿ ಯಜಮಾನರು ಸಂಸಾರ ಹೂಡಿದ ಮೇಲೆ ಅ.ನ.ಕೃ. ಅವರು ಮೈಸೂರಿಗೆ ಬಂದಾಗಲೆಲ್ಲ ನಮ್ಮ ಮನೆಗೂ ಬರುತ್ತಿದ್ದರು. ಮೈಸೂರಿನಲ್ಲಿದ್ದ ಯಜಮಾನರ ಮಿತ್ರರಾದ ಎಂ. ಗೋಪಾಲಕೃಷ್ಣ ಅಡಿಗ, ಚದುರಂಗರು ಜೊತೆಗೆ ಸೇರುತ್ತಿದ್ದರು. ಏನಾದರೊಂದು ಸಾಹಿತ್ಯದ ವಿಷಯ ಚರ್ಚೆ ಮಾಡುತ್ತಿದ್ದರು. ರಾಯರೊಂದಿಗೆ ನಾನು ಬೆಂಗಳೂರಿಗೆ ಹೋದಾಗಲೆಲ್ಲ, ಅ.ನ.ಕೃ. ಅವರ ಮನೆಯಲ್ಲಿ ಇಳಿದುಕೊಳ್ಳುತ್ತಿದ್ದೆವು. ದೇವುಡು, ದ.ಕೃ. ಭಾರದ್ವಾಜರು, ಮುಂತಾದ ಬೆಂಗಳೂರಿನ ಸಾಹಿತಿ ಮಿತ್ರರು, ಧಾರವಾಡದಿಂದ ಬರುತ್ತಿದ್ದ ಮಲ್ಲಿಕಾರ್ಜುನ ಮನ್ಸೂರ್‌ರಂತಹ ಸಂಗೀತ ಶಿರೋಮಣಿಗಳು ಅ.ನ.ಕೃ. ಮನೆಯಲ್ಲಿ ಕಲೆಯುತ್ತಿದ್ದರು. ಅಂತಹ ಸಹೃದಯ ಮಿತ್ರರು ಸೇರಿದಾಗ ನಮಗೆ ಮಾತಿನ ರಸಗವಳ ಉಂಡಷ್ಟು ಸಂತೋಷವಾಗುತ್ತಿತ್ತು. ಎಂತೆಂತಹ ಮಹನೀಯರ ಸ್ನೇಹ, ಒಡನಾಟ, ಪರಿಚಯ ಆಗೆಲ್ಲ. ಅವರುಗಳ ಆದರ, ವಿಶ್ವಾಸ, ಗೌರವಪೂರ್ಣ ನಡವಳಿಕೆಗಳು

ಎಲ್ಲಾ ಅವರ ಕಾಲಕ್ಕೇ ಸರಿದುಹೋದವು. ಈಗೇನಿದೆ – ಬರೀ ಡಂಬಾಚಾರ. ಸಾಹಿತ್ಯರಂಗದಲ್ಲೂ ರಾಜಕೀಯ ಸ್ವಾರ್ಥ!

ಕನ್ನಡ ಸಾಹಿತ್ಯ ಪರಿಷತ್ತಿನ ಬೆಳ್ಳಿಹಬ್ಬದ ಸಮಾರಂಭದಲ್ಲಿ ತ.ರಾ.ಸು. ಅವರಿಗೆ ಹಿರಿಯರಾದ ಮಾಸ್ತಿಯವರಿಂದ 'ಶ್ರೇಷ್ಠ ಕಾದಂಬರಿಕಾರ' ಪ್ರಶಸ್ತಿ, ಸನ್ಮಾನ ಸಂದಾಗಲೂ ಅ.ನ.ಕೃ. ಮುಂದಿನ ಸಾಲಿನಲ್ಲಿಯೇ ಕುಳಿತು ಸಂತೋಷಪಟ್ಟರು. ಪಕ್ಕದಲ್ಲಿದ್ದ ನನ್ನ ಮಾವನವರಿಗೆ – 'ಏನು ರಾಮಸ್ವಾಮಯ್ಯ, ನಿಮ್ಮ ಮಗ ಏನೋ ಆಗಿಬಿಡುತ್ತಾನೆಂದು ಕಳವಳ ಪಡ್ತಾ ಇದ್ರಲ್ಲ... ಈಗ ಏನು ಹೇಳ್ತೀರಿ?' ಎಂದು ಹೃದಯ ತುಂಬಿ ಕೇಳಿದರು.

ಹೀಗೆ ಹಲವಾರು ಪ್ರಸಂಗಗಳು ನೆನಪಾಗುತ್ತವೆ. ಅ.ನ.ಕೃ. ತೋರಿದ ಪ್ರೀತಿಯ ನೆನಪು ಯಜಮಾನರಿಗೆ ಉಸಿರಿರುವವರೆಗೂ ನಂದಾದೀಪವಾಗಿತ್ತು. ಸಂದರ್ಭವಿರಲಿ, ಇಲ್ಲದಿರಲಿ ಅ.ನ.ಕೃ. ಅವರನ್ನು ಯಜಮಾನರು ನೆನೆಯದ ದಿನವಿರಲಿಲ್ಲ.

1971ರ ಯುಗಾದಿ ಹಬ್ಬದ ವೇಳೆಯಲ್ಲಿ ಯಜಮಾನರಾದ ತ.ರಾ.ಸು. ಅವರು ಕಾಯಿಲೆಯಿಂದ ಮಲಗಿ ಕೆ.ಆರ್. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದರು. ಆಗ ಅವರು ಬದುಕಿ ಬಂದದ್ದೇ ಹೆಚ್ಚಾಯಿತು. ಬೆಂಗಳೂರಿನಿಂದ ಬಂದ